ಹಾರನಹಳ್ಳಿ - ಜಾವಗಲ್ ನಡುವೆ ಹದಗೆಟ್ಟ ರಸ್ತೆ

15 ದಿನಗಳೊಳಗೆ ದುರಸ್ತಿಪಡಿಸದಿದ್ದರೆ ರಸ್ತೆ ತಡೆ ಹೋರಾಟ

ಹಾರನಹಳ್ಳಿಯಿಂದ ಜಾವಗಲ್ ಮಾರ್ಗದ ರಸ್ತೆ ತೀವ್ರ ಹದಗೆಟ್ಟಿದ್ದು ರಸ್ತೆ ಸರಿ ಪಡಿಸಬೇಕೆಂದು ಒತ್ತಾಯಿಸಿ ಗೇರುಮರದ ರಾಜಣ್ಣ ಪತ್ರಿಕಾಗೋಷ್ಠಿ ನಡೆಸಿದರು.

ಅರಸೀಕೆರೆ : ಹಾರನಹಳ್ಳಿಯಿಂದ ಜಾವಗಲ್ ಮಾರ್ಗದ ರಸ್ತೆ ತೀವ್ರ ಹದಗೆಟ್ಟಿದ್ದು ಜನಸಾಮಾನ್ಯರು ಓಡಾಡದಂತಹ ಸ್ಥಿತಿ ತಲುಪಿದೆ. ಈ ಬಗ್ಗೆ ಸಂಬಂಧಪಟ್ಟವರು ಇನ್ನು 15 ದಿನದೊಳಗಾಗಿ ರಸ್ತೆ ಸರಿಪಡಿಸದಿದ್ದರೇ ರಸ್ತೆ ತಡೆದು ಹೋರಾಟ ನಡೆಸಲಾಗುವುದು ಎಂದು ಗೇರುಮರದ ರಾಜಣ್ಣ ಹೇಳಿದರು.

ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಹಾರನಹಳ್ಳಿಯಿಂದ ಜಾಗವಲ್‌ಗೆ 22 ಕಿ.ಮೀ. ದೂರವಿದ್ದು ಈ ಭಾಗದ ರಸ್ತೆ ಅಭಿವೃದ್ಧಿಪಡಿಸಿ ಹಲವು ವರ್ಷಗಳೇ ಕಳೆದಿದೆ. ರಸ್ತೆ ಹದಗೆಟ್ಟಿರುವುದರಿಂದ ಈ ಭಾಗದಲ್ಲಿ ಸಂಚರಿಸುವ ಸಾರಿಗೆ ವಾಹನಗಳು ಪ್ರತಿನಿತ್ಯ ಸರಿಯಾಗಿ ಬರುತ್ತಿಲ್ಲ, ದ್ವಿಚಕ್ರ ವಾಹನಗಳು ಓಡಾಡಲು ಅನಾನುಕೂಲವಾಗಿದ್ದು ರೋಗಿಗಳು ಆಸ್ಪತ್ರೆಗೆ ಹೋಗದಂತ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೇ ಉಂಡಿಗನಾಳು ಮತ್ತು ತಿಮ್ಮಪ್ಪನಹಳ್ಳಿ ಬಳಿ 2 ಸೇತುವೆಗಳು ಮುರಿದು ಬೀಳುವ ಸ್ಥಿತಿಯಲ್ಲಿದ್ದು ಜೀವವನ್ನು ಕೈಯಲ್ಲಿ ಹಿಡಿದು ಸಂಚರಿಸುವ ಪರಿಸ್ಥಿತಿ ಇದೆ. ಅಲ್ಲದೇ ಕರಗುಂದ ಕೆರೆ ಏರಿ ಮೇಲೆ ರಸ್ತೆ ಸಮತಟ್ಟವಾಗಿಲ್ಲದೇ ಈ ಭಾಗದಲ್ಲಿ ಚಲಿಸುವ ಶಾಲೆಯ ಬಸ್ಸುಗಳು ಚಲಿಸುವಾಗ ವಾಲುತ್ತಾ ಸಾಗುತ್ತವೆ ಈ ಬಗ್ಗೆ ತಕ್ಷಣವೇ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಗಮನಹರಿಸಬೇಕೆಂದು, ಇಲ್ಲದಿದ್ದರೇ ಹೋರಾಟವನ್ನು ಎದುರಿಸಬೇಕಾಗುತ್ತದೆ ಎಂದರು.

ಅಖಿಲ ಭಾರತ ಕಿಸಾನ್ ಸಭಾದ ರಾಜ್ಯ ಸಮಿತಿ ಸದಸ್ಯ ಎಂ.ಸಿ. ಡೌಂಗ್ರೆ ಮಾತನಾಡಿ, ಈ ಭಾಗದ ರಸ್ತೆಗೆ ಬೇಲೂರು ಸೇರಿದಂತೆ ಅರಸೀಕೆರೆಯ ಶಾಸಕರು ಸಂಬಂಧಪಡುತ್ತಾರೆ ಇದರೊಂದಿಗೆ ಜಿ.ಪಂ. ಸದಸ್ಯರು, ಗ್ರಾಮಪಂ. ಸದಸ್ಯರುಗಳು ಗಮನಹರಿಸುತ್ತಿಲ್ಲ ಈ ಎಲ್ಲಾ ಬೆಳವಣಿಗೆಗೆ ಮುಂದಿನ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಚುನಾವಣಾ ಬಹಿಷ್ಕರ ಹಾಕುವ ಮೂಲಕ ತಕ್ಕ ಪಾಠ ಕಲಿಸಲಾಗುವುದು ಎಂದರು.

ಬಸ್ ನಿಲ್ದಾಣ ನಿರ್ಮಿಸಿ: ಗೇರುಮರದ ಸರ್ಕಲ್‌ನಲ್ಲಿ ಉತ್ತಮವಾದ ಬಸ್‌ನಿಲ್ದಾಣದ ಅವಶ್ಯಕತೆ ಇದ್ದು ಈ ಬಗ್ಗೆಯೂ ಕ್ರಮ ಕೈಗೊಳ್ಳಬೇಕೆಂದರು.

ಸುದ್ದಿಗೋಷ್ಠಿಯಲ್ಲಿ ಕೇಶವ ಮೂರ್ತಿ, ಉಂಡಿಗನಾಳು ಯು.ಆರ್. ಕೃಷ್ಣಮೂರ್ತಿ, ಷಡಾಕ್ಷರಿ, ಸಿದ್ದೇಶ್ ಇದ್ದರು.

ಬಿಜೆಪಿ ಹಿಂದುಳಿದ ವರ್ಗದ ತಾಲೂಕು ಅಧ್ಯಕ್ಷರ ನೇಮಕ

ಬೇಲೂರು : ತಾಲೂಕು ಬಿಜೆಪಿ ಘಟಕದ ಹಿಂದುಳಿದ ವರ್ಗದ ಅಧ್ಯಕ್ಷರಾಗಿ ತಾಲೂಕಿನ ಸವಾಸೀಹಳ್ಳಿ ಬಸವರಾಜುರನ್ನು ನೇಮಕ ಮಾಡಲಾಗಿದೆ ಎಂದು ತಾಲೂಕು ಬಿಜೆಪಿ ಅಧ್ಯಕ್ಷ ಕೊರಟಿಕೆರೆ ಪ್ರಕಾಶ್ ತಿಳಿಸಿದರು.

ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು ಬೇಲೂರು ತಾಲೂಕು ಹಿಂದುಳಿದ ವರ್ಗದ ಅಧ್ಯಕ್ಷರಾಗಿದ್ದ ಶಿವಣ್ಣ ಎಂಬುವವರನ್ನು ಪಕ್ಷದ ಕಾರ್ಯಕಾರಿಣಿ ಸಮಿತಿ ನಿರ್ಣಯದಂತೆ ಹುದ್ದೆಯಿಂದ ವಜಾ ಮಾಡಿದ್ದು, ಅವರ ಸ್ಥಾನಕ್ಕೆ ಹಿಂದುಳಿದ ವರ್ಗದ ಮುಖಂಡ ಸವಾಸಿಹಳ್ಳಿ ಬಸವರಾಜುರನ್ನು ನೇಮಕ ಮಾಡಲಾಗಿದೆ ಎಂದಿದ್ದಾರೆ.

ಅಟ್ಟಣಿಗೆ ಕಾಮಗಾರಿಗೆ ಚಾಲನೆ

ಶ್ರವಣಬೆಳಗೊಳ : 2018 ರಲ್ಲಿ ಜರುಗಲಿರುವ ಮಹಾಮಸ್ತಕಾಭಿಷೇಕ ಮಹೋತ್ಸವದ ಅಟ್ಟಣಿಗೆ ಕಾಮಗಾರಿಯನ್ನು ಮಹೋತ್ಸವ ವಿಶೇಷಾಧಿಕಾರಿ ವರಪ್ರಸಾದ ರೆಡ್ಡಿ ನೇತೃತ್ವದಲ್ಲಿ ಪೂಜೆ ನೆರವೇರಿಸಿ ಚಾಲನೆ ನೀಡಲಾಯಿತು.

ಬುಧವಾರ ಬೆಳಗ್ಗೆ ವಿಂಧ್ಯಗಿರಿ ಬೆಟ್ಟದ ಮೇಲೆ ಜೈನ ಸಂಪ್ರದಾಯದ ಪ್ರಕಾರ ಧಾರ್ಮಿಕ ವಿಧಿ-ವಿಧಾನ, ಪೂಜೆ ನೆರವೇರಿಸಿ ಅಟ್ಟಣಿಗೆ ಕಾಮಗಾರಿ ಆರಂಭಿಸಲಾಯಿತು. ಈ ಕಾಮಗಾರಿಯನ್ನು ಶನಿವಾರ ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಉದ್ಘಾಟಿಸಿದ್ದರು.

12.5 ಕೋಟಿ ವೆಚ್ಚದ ಮಹತ್ವಾಕಾಂಕ್ಷೆಯ ಹಾಗೂ ಅತ್ಯಂತ ಪ್ರಮುಖವಾದ ಅಟ್ಟಣಿಗೆ ಕಾಮಗಾರಿ ಯೋಜನೆಯನ್ನು ಪಿ.ಡಬ್ಲ್ಯೂ.ಡಿ. ಇಲಾಖೆಯು ನಿರ್ವಹಿಸುತ್ತಿದೆ. ಜರ್ಮನ್ ತಂತ್ರಜ್ಞಾನದ ಆರ್ಟ್‌ರಿಂಗ್ ಅಂಡ್ ಲಾಕ್ ಪದ್ದತಿಯ ಈ ಅಟ್ಟಣಿಗೆಯನ್ನು ಜರ್ಮನ್ ಮೂಲದ ಲೇಹರ್ ಕಂಪೆನಿ ಲಿಮಿಟೆಡ್ ಸಂಸ್ಥೆಗೆ ವಹಿಸಲಾಗಿದೆ. ಡಿಸೆಂಬರ್ 31 ರೊಳಗೆ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಲೇಹರ್ ಸಂಸ್ಥೆಯ ತಾಂತ್ರಿಕ ವಿಭಾಗದ ಸಹಾಯಕ ವ್ಯವಸ್ಥಾಪಕ ಕಾಥಿರೇಸನ್ ತೇವರ್ ತಿಳಿಸಿದರು.

ಈ ವೇಳೆ ಪಿ.ಡಬ್ಲ್ಯೂ.ಡಿ. ಎಂಜಿನಿಯರ್‌ಗಳಾದ ಜೀವನ್ ಪಟೇಲ್, ಮಂಜೇಶ್, ಕಂದಾಯ ನಿರೀಕ್ಷಕ ಮೋಹನ್‌ಕುಮಾರ್, ಲೇಹರ್ ಸಂಸ್ಥೆಯ ಕಾಮಗಾರಿ ವಿಭಾಗದ ಸಹಾಯಕ ವ್ಯವಸ್ಥಾಪಕ ಮಹೇಶ್ ಕುಮಾರ್, ಜೈನ ಮಠದ ಎಂಜಿನಿಯರ್ ದರ್ಶನ್ ಜೈನ್ ಮುಂತಾದವರಿದ್ದರು.

ಮನೆ ಬಾಡಿಗೆಗೆ ಬೇಕಾಗಿದೆ

ಹಾಸನದ ವಿದ್ಯಾನಗರ, ಕುವೆಂಪುನಗರ, ರವೀಂದ್ರನಗರ, ಶಂಕರೀಪುರಂ ಬಡಾವಣೆಗಳಲ್ಲಿ 3 ಬೆಡ್‌ರೂಂ, ಕಾರ್‌ಶೆಡ್, ನೀರಿನ ಸೌಕರ್ಯವಿರುವ ವಿಶಾಲವಾದ ಪ್ರತ್ಯೇಕ ಮನೆ ಬಾಡಿಗೆಗೆ ಬೇಕಾಗಿದೆ. ಸಂಪರ್ಕಿಸಿ :

94480 68008

ಬಾಡಿಗೆಗಿದೆ

ಹಾಸನದ ಶ್ರೀಕಂಠನಗರ
ಬಡಾವಣೆಯ ಮೊದಲನೇ
ಕ್ರಾಸ್‌ನಲ್ಲಿ ಡಬಲ್ ಬೆಡ್‌ರೂಮ್
ಮನೆ ಬಾಡಿಗೆಗಿದೆ. ಸಂಪರ್ಕಿಸಿ :

94493 94814

ವಧು-ವರರ ಅನ್ವೇಷಣೆ

ಆದಿಚುಂಚನಗಿರಿ ಒಕ್ಕಲಿಗರ ಮಹಿಳಾ ಸಮಾಜ
ರವೀಂದ್ರನಗರ (ಪಾರ್ಕ್ ರಸ್ತೆ) ಹಾಸನ.
08172 233188, 82775 92892

ನಮ್ಮ ಸಮಾಜದ ವಧು-ವರರ ಅನ್ವೇಷಣಾ ಕೇಂದ್ರದಲ್ಲಿ ವಧು-ವರರ ಮಾಹಿತಿಯನ್ನು ನೊಂದಣಿ ಮಾಡಲು ಹಾಗೂ ಪಡೆಯಲು ಸಂಘದ ಕಛೇರಿಯನ್ನು ಸಂಪರ್ಕಿಸಿ:

ಸಮಯ : ಬೆಳಿಗ್ಗೆ 11 ರಿಂದ 1
ಸಂಜೆ 4 ರಿಂದ 6 ಘಂಟೆವರೆಗೆ

ವಾರಕ್ಕೆ ಒಂದರಂತೆ ವಾರ್ಡ್ ಸ್ವಚ್ಛತೆ

ಹೊಳೆನರಸೀಪುರ : ಪಟ್ಟಣದ 23 ವಾರ್ಡ್‌ಗಳಲ್ಲಿರುವ ಕೊಳಚೆ ಸ್ಥಳಗಳನ್ನು ವಾರಕ್ಕೆ ಒಂದು ದಿನ ಸಂಪೂರ್ಣವಾಗಿ ಸ್ವಚ್ಛಗೊಳಿಸಲು ಪುರಸಭೆ ಆಡಳಿತ ಕ್ರಮ ಕೈಗೊಳ್ಳಲಿದೆ ಎಂದು ಪುರಸಭೆ ಅಧ್ಯಕ್ಷ ಕೆ.ಆರ್.ಸುಬ್ರಹ್ಮಣ್ಯ ತಿಳಿಸಿದರು.

ಅವರು ಗಾಂಧಿನಗರದ ಪ್ರಮುಖ ರಸ್ತೆಯಲ್ಲಿ ಸ್ವಚ್ಛತಾ ಕಾರ್ಯ ಕೈಗೊಂಡು ಮಾತನಾಡಿದರು. ಪುರಸಭಾ ವ್ಯಾಪ್ತಿಯ ಹಲವು ವಾರ್ಡ್‌ಗಳ ಕೆಲವು ಬೀದಿಗಳ ಚರಂಡಿಯಲ್ಲಿ ನೀರು ಸರಾಗವಾಗಿ ಹರಿಯದೆ ತೊಂದರೆ ಆಗಿದೆ. ಕಾರಣ ಚರಂಡಿಯಲ್ಲಿ ತ್ಯಾಜ್ಯ ವಸ್ತುಗಳು ತುಂಬಿಕೊಂಡು ಹಾಳಾಗಿವೆ. ಈ ಅವ್ಯವಸ್ಥೆಯಿಂದ ರಸ್ತೆಯಲ್ಲಿ ಕೊಳಚೆ ನೀರು ತುಂಬಿಕೊಳ್ಳುತ್ತಿದೆ. ಈ ರೀತಿ ಬೀದಿಗಳನ್ನು ಪರಿಶೀಲಿಸಿದ್ದು ಅಂತಹ ಬೀದಿಗಳನ್ನು ಸ್ವಚ್ಛಗೊಳಿಸಲು ತುರ್ತು ಕ್ರಮ ಕೈಗೊಳ್ಳುತ್ತಿದ್ದೇವೆ. ಇದಕ್ಕಾಗಿ ಪುರಸಭೆಯ ಪೌರಕಾರ್ಮಿಕರ 30 ಜನಗಳ ಗುಂಪನ್ನು ರಚಿಸಿದ್ದು ಅವರು ಹಿರಿಯ ಆರೋಗ್ಯ ನಿರೀಕ್ಷಕರ ನಿರ್ದೇಶನದಂತೆ ಹಾಗೂ ಅಧ್ಯಕ್ಷರ ಮಾರ್ಗದರ್ಶನ ಮತ್ತು ಪುರಸಭಾ ಸದಸ್ಯರ ಸೂಚನೆಯಂತೆ ಕೆಲಸ ನಿರ್ವಹಿಸಲಿದ್ದಾರೆ ಎಂದು ಹೇಳಿದರು.

ನಮ್ಮ ಉದ್ದೇಶ ಪಟ್ಟಣವನ್ನು ಶುಚಿಯಾಗಿ ಇರುವಂತೆ ನಿರ್ಮಾಣ ಮಾಡುವುದೇ ಆಗಿದೆ. ಆದ್ದರಿಂದ ಪಟ್ಟಣದ ನಾಗರಿಕರು ಇದಕ್ಕಾಗಿ ಸಹಕರಿಸಬೇಕು. ತ್ಯಾಜ್ಯ ವಸ್ತುಗಳನ್ನು ದಿನಬಳಕೆಯಲ್ಲಿ ಬಿಸಾಡದೆ ಒಂದು ನಿಗಧಿತ ಸ್ಥಳದಲ್ಲಿ ಹಾಕಬೇಕು. ಪುರಸಭಾ ವತಿಯಿಂದ ವಿತರಿಸಿರುವ ಕಸದ ಬಕೆಟ್‌ಗಳಲ್ಲಿ ಕಸವನ್ನು ಸಂಗ್ರಹಿಸಿಟ್ಟು ತ್ಯಾಜ್ಯ ವಿಲೇವಾರಿ ಮಾಡುವ ಆಟೋ ಟಿಪ್ಪರ್‌ಗಳಿಗೆ ಹಾಕಬೇಕೆಂದು ಮನವಿ ಮಾಡಿದರು.

ಪರಿಸರ ಅಭಿಯಂತಕಿ ಅಶ್ವಿನಿ ಮಾತನಾಡಿ ಸ್ವಚ್ಛತೆಯನ್ನು ಕಾಪಾಡುವುದರಿಂದ ಸಾಂಕ್ರಾಮಿಕ ರೋಗರುಜಿನಗಳನ್ನು ತಡೆಗಟ್ಟಬಹುದು ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಆರೋಗ್ಯ ನಿರೀಕ್ಷಕ ವಸಂತ್‌ಕುಮಾರ್, ಪುರಸಭಾ ಸದಸ್ಯರಾದ ರಘುರಾಂ, ಸ್ವಾಮಿ, ಮಾಜಿ ಸದಸ್ಯ ಗೋವಿಂದರಾಜು, ವೆಂಕಟೇಶ್, ಸ್ಥಳೀಯ ನಾಗರಿಕರು ಪಾಲ್ಗೊಂಡಿದ್ದರು.

ವೈದ್ಯರ ಬಳಿ ಮುಕ್ತವಾಗಿ ತಿಳಿಸಿದರೆ ಸಮಸ್ಯೆಗೆ ಪರಿಹಾರ

ಮಾನಸಿಕ ಆರೋಗ್ಯ ದಿನದ ಅಂಗವಾಗಿ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ನ್ಯಾಯಾಧೀಶರಾದ ಆಶಾ. ಕೆ ಎಸ್. ಮಾತನಾಡಿದರು

ಆಲೂರು : ಯಾವುದೇ ಆರೋಗ್ಯ ಸಮಸ್ಯೆಯಾದರು ಸ್ಥಳೀಯ ವೈದ್ಯಾಧಿಕಾರಿಗಳನ್ನು ಭೇಟಿಯಾಗಿ ಮನಸ್ಸಿನಲ್ಲಿರುವುದನ್ನು ಮುಕ್ತವಾಗಿ ಹಂಚಿಕೊಂಡಾಗ ಮಾತ್ರ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ ಎಂದು ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದ ನ್ಯಾಯಾದೀಶೆ ಹಾಗು ಸದಸ್ಯ ಕಾರ್ಯದರ್ಶಿ ಆಶಾ. ಕೆ ಎಸ್. ತಿಳಿಸಿದರು.

ಪಟ್ಟಣದ ಬಿಕ್ಕೋಡು ರಸ್ತೆಯ ನ್ಯಾಯಾಲಯದ ಸಭಾಂಗಣದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ಆರೋಗ್ಯ ಇಲಾಖೆ ವತಿಯಿಂದ ಆಯೋಜಿಸಿದ್ದ ಮಾನಸಿಕ ಆರೋಗ್ಯ ದಿನದ ಅಂಗವಾಗಿ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಯಾವುದೇ ಇಲಾಖೆಗಳಲ್ಲಿ ಸಾರ್ವಜನಿಕರ ಮಧ್ಯದಲ್ಲಿ ಕೆಲಸ ಮಾಡುವಾಗ ಮಾನಸಿಕ ಒತ್ತಡಗಳಿರುವುದು ಸತ್ಯದ ಸಂಗತಿಯಾಗಿದ್ದು, ಸಿಬ್ಬಂದಿಗಳಿಂದಲೂ ಹೆಚ್ಚು ಒತ್ತಡಗಳಿರುತ್ತವೆ. ಎಲ್ಲಾ ಸಮಸ್ಯೆಗಳಿಗೂ ಅಲ್ಲೆ ಪರಿಹಾರಗಳಿರುತ್ತವೆ. ಅವುಗಳನ್ನು ಸಮಾಧಾನದಿಂದ ವರ್ತಿಸಿ ಪರಿಹಾರ ಕಂಡುಕೊಳ್ಳಬೇಕು ಎಂದರು.

ತಾಲೂಕು ಆರೋಗ್ಯಾಧಿಕಾರಿ ಡಾ ॥ ತಿಮ್ಮಯ್ಯ ಮಾತನಾಡಿ ಕೆಲಸ ಮಾಡುವ ಯಾವುದೇ ಜಾಗದಲ್ಲಿ ಒಂದೇ ಮನಸ್ಥಿತಿಯ ಸಿಬ್ಬಂದಿ ಇರುವುದಿಲ್ಲ, ಅದ್ದರಿಂದ ಎಲ್ಲರ ಮನಸ್ಥಿತಿಯನ್ನು ಅರ್ಥ ಮಾಡಿಕೊಂಡು ಯಾವುದೇ ಒತ್ತಡಕ್ಕೆ ಮಣಿಯದೇ ಅಲ್ಲೆ ಸೂಕ್ತ ಪರಿಹಾರವನ್ನು ಕಂಡು ಹಿಡಿದು ಸೂಕ್ತ ಪರಿಹಾರವನ್ನು ಹುಡುಕಿಕೊಂಡು ತಮ್ಮ ಕೆಲಸವನ್ನು ಜವಾಬ್ದಾರಿಯಿಂದ ಮಾಡಬೇಕು ಎಂದಲ್ಲದೇ ಅತಿಯಾದ ಮಾನಸಿಕ ಒತ್ತಡ ಹೆಚ್ಚಿದ್ದರೆ ಸ್ಥಳೀಯ ವೈದ್ಯರನ್ನು ಭೇಟಿಯಾಗಿ ಸೂಕ್ತ ಚಿಕಿತ್ಸೆಯನ್ನು ಪಡೆಯುವುದು ಒಳಿತು ಎಂದು ತಿಳಿಸಿದರು.

ತಾಲೂಕು ವಕೀಲರ ಸಂಘದ ಅಧ್ಯಕ್ಷ ಎಂ.ಎಸ್. ಮಹೇಶ್ ಮಾತನಾಡಿ, ಸಿಬ್ಬಂದಿಗಳು ಕಚೇರಿಗೆ ಹೋದಾಗ ಸಾರ್ವಜನಿಕರ ಜೊತೆ ಒಳ್ಳೆಯ ರೀತಿಯ ಪ್ರೀತಿ ಸಹನಾ ಮನೋಭಾವದಿಂದ ವರ್ತಿಸಬೇಕು ಇದರಿಂದ ಕೆಲಸದಲ್ಲಿ ಪ್ರಗತಿ ಸಾಧಿಸಬಹುದು ತಾಲೂಕಿನಲ್ಲಿ ನ್ಯಾಯಾಲಯ ಪ್ರಾರಂಭವಾಗಿ 19 ವರ್ಷಗಳು ಕಳೆಯುತ್ತ ಬಂದಿದೆ, ಆದರೆ ಹಿರಿಯ ಶ್ರೇಣಿ ನ್ಯಾಯಾಲಯ ಇಲ್ಲದಿರುವುದು ವಿಪರ್ಯಾಸದ ಸಂಗತಿಯಾಗಿದೆ. ಈ ಹಿಂದೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶ ನಜೀರ್ ಸಾಹೇಬ್‌ರವರು ಆಲೂರು ತಾಲೂಕಿಗೆ ಹಿರಿಯ ಶ್ರೇಣಿ ನ್ಯಾಯಾಲಯವನ್ನು ನೀಡುವುದಾಗಿ ಭರವಸೆ ನೀಡಿದ್ದರು ಆದರೆ ಅ ಭರವಸೆ ಹಸಿಯಾಗಿಯೇ ಉಳಿದಿದೆ ಕೂಡಲೆ ಸರ್ಕಾರ ಈ ಬಗ್ಗೆ ಗಮನ ಹರಿಸಿ ತಾಲೂಕಿಗೆ ಹಿರಿಯ ಶ್ರೇಣಿಯ ನ್ಯಾಯಾಲಯವನ್ನು ನೀಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಹಿರಿಯ ವಕೀಲರಾದ ಕೆ.ನಾಗರಾಜು. ವಕೀಲರುಗಳಾದ ನಾಗರಾಜು, ಸುರೇಶ್, ಉಮೇಶ್, ನಾಗರಾಜು, ಶ್ರೀನಿವಾಸ್, ವಿನುತಾ, ಮುಂತಾದವರು ಹಾಜರಿದ್ದರು.

ಹಾಸನಾಂಬ ಜಾತ್ರಾ ಮಹೋತ್ಸವ

ಇಂದಿನಿಂದ ಆರಂಭಗೊಳ್ಳುತ್ತಿದ್ದು
ಜಾತ್ರಾ ಮಹೋತ್ಸವಕ್ಕೆ ಆಗಮಿಸುವ
ಎಲ್ಲ ಭಕ್ತರಿಗೂ ಸುಸ್ವಾಗತ ಕೋರುವ

ಡಿ. ಅಶೋಕ್
ಪ್ರಧಾನ ಕಾರ್ಯದರ್ಶಿ
ಜಿಲ್ಲಾ ಬಿ.ಜೆ.ಪಿ. ಘಟಕ, ಹಾಸನ

ಕೆ.ಆರ್.ಎಸ್.ಗೆ ಹೇಮಾವತಿ ನೀರು

(ಒಂದನೇ ಪುಟದಿಂದ)

ಹೇಮಾವತಿ ಜಲಾಶಯದಲ್ಲಿ ತಕ್ಷಣ ನೀರು ನಿಲ್ಲಿಸದೆ ಹೊರ ಬಿಟ್ಟರೆ ಮುಂದೆ ಬೇಸಿಗೆ ಕಾಲ ಬರುವುದರಿಂದ ನೀರಿನ ಪ್ರಮಾಣ ಕಡಿಮೆಯಾಗುತ್ತದೆ. ಸರಕಾರವು ಯಾವುದೇ ಸಂದರ್ಭದಲ್ಲಿ ನೀರನ್ನು ಬಿಡಬೇಕೆಂದು ಆದೇಶಿಸಿದರೆ, ಹಾಸನ ಜಿಲ್ಲೆಗೆ ನೀರು ಸಿಗುವುದಿಲ್ಲ. ನಂತರ ಮುಂದಿನ ವರ್ಷದ ಮಳೆಗಾಲದವರೆಗೂ ನೀರಿಗೆ ಪರಿತಪಿಸಬೇಕಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸಂಘಟನೆಯ ಜಿಲ್ಲಾಧ್ಯಕ್ಷ ಸಿ.ಡಿ. ಮನುಕುಮಾರ್, ಉಪಾಧ್ಯಕ್ಷ ಸೀತಾರಾಮು, ಹರೀಶ್‌ಗೌಡ, ನಗರಾಧ್ಯಕ್ಷ ರಾಘುಗೌಡ, ತಾಲೂಕು ಅಧ್ಯಕ್ಷ ಶಿವಣ್ಣಗೌಡ, ಯುವ ಘಟಕದ ಅಧ್ಯಕ್ಷ ಪ್ರೀತಂ, ವಿದ್ಯಾರ್ಥಿ ಘಟಕದ ಅಧ್ಯಕ್ಷ ಅಭಿಗೌಡ, ಮಹಿಳಾ ಘಟಕದ ತಾಲೂಕು ಅಧ್ಯಕ್ಷೆ ರೇಖಾ, ನಗರಾಧ್ಯಕ್ಷೆ ವಿಜಯಲಕ್ಷ್ಮಿ, ವಸಂತಕುಮಾರ್ ಇತರರು ಪಾಲ್ಗೊಂಡಿದ್ದರು.

ಹಾಸನಾಂಬ ಜಾತ್ರಾ ಮಹೋತ್ಸವ ಇಂದಿನಿಂದ ಆರಂಭ

(ಒಂದನೇ ಪುಟದಿಂದ)

ಅ.20 ರಂದು ಬೆಳಿಗ್ಗೆ 5 ಗಂಟೆಯಿಂದ ಸಂಜೆ 5 ಗಂಟೆಯವರೆಗೆ, ಸಂಜೆ 5 ಗಂಟೆಯಿಂದ ರಾತ್ರಿ 9 ಅಮ್ಮನವರಿಗೆ ನೈವೇದ್ಯ/ಅಭಿಷೇಕ ನಡೆಯುತ್ತದೆ. ರಾತ್ರಿ 9 ಗಂಟೆಯಿಂದ ಅ.21 ರ ಬೆಳಿಗ್ಗೆ 6 ಗಂಟೆಯವರಿಗೆ ದರ್ಶನಕ್ಕೆ ಅವಕಾಶವಿರುತ್ತದೆ. ರಾತ್ರಿ 10.30 ಕ್ಕೆ ಶ್ರೀ ಸಿದ್ದೇಶ್ವರಸ್ವಾಮಿಯ ಚಂದ್ರಮಂಡಲ ರಥೋತ್ಸವವಿರುತ್ತದೆ.

ಅ.21 ರಂದು ಅಮ್ಮನವರ ದರ್ಶನಕ್ಕೆ ಸಾರ್ವಜನಿಕ ದರ್ಶನ ಇರುವುದಿಲ್ಲ. ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 12 ರವರೆಗೆ ಅಮ್ಮನವರಿಗೆ ನೈವೇದ್ಯ/ಅಭಿಷೇಕ ನಡೆಯುತ್ತದೆ.

ಕಳ್ಳರ ಬಂಧನ : 5.25 ಲಕ್ಷ ರೂ. ಚಿನ್ನಾಭರಣ, ಬೈಕ್ ವಶ

(ಒಂದನೇ ಪುಟದಿಂದ)

ನಗರದ ಕಳ್ಳತನದಲ್ಲಿ ಇನ್ನು 46 ಬೈಕ್‌ಗಳನ್ನು ಪತ್ತೆ ಮಾಡಬೇಕಾಗಿದೆ ಎಂದ ಎಸ್ಪಿ ರಾಹುಲ್‌ಕುಮಾರ್, ವಾಹನದ ದಾಖಲಾತಿ ಕೊಡುವುದಾಗಿ ಹೇಳುತ್ತಿದ್ದ ಆರೋಪಿಗಳು ಮೊದಲು ಕಡಿಮೆ ದರಕ್ಕೆ ಬೈಕನ್ನು ಮಾರಾಟ ಮಾಡುತ್ತಿದ್ದರು ಎಂದು ವಿವರ ನೀಡಿದರು.

ಇದೇ ವೇಳೆ ಅಪರ ಪೊಲೀಸ್ ಅಧೀಕ್ಷಕ ವಿ.ಎಂ. ಜ್ಯೋತಿ, ಹಾಸನ ಉಪ ವಿಭಾಗ ಡಿವೈಎಸ್ಪಿ ಶಶಿಧರ್, ವೈ. ಸತ್ಯನಾರಾಯಣ್, ಸಬ್ ಇನ್ಸ್‌ಪೆಕ್ಟರ್ ಆರೋಕಿಯಪ್ಪ, ಹರೀಶ್, ಸುರೇಶ್ ಇತರರು ಉಪಸ್ಥಿತರಿದ್ದರು.

ಅರಕಲಗೂಡು ತಾಲೂಕು ಕೊಣನೂರಿನ ಬಿ.ಎಂ.ಶೆಟ್ಟಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2017-18ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಎನ್.ಎಸ್.ಎಸ್., ಸ್ಕೌಟ್ಸ್ ಮತ್ತು ಗೈಡ್ಸ್, ಯುವ ರೆಡ್ ಕ್ರಾಸ್ ಹಾಗೂ ಇತರೆ ಪಠ್ಯೇತರ ಚಟುವಟಿಕೆಗಳ ಸಮಾರಂಭದ ಕಾರ್ಯಕ್ರಮವನ್ನು ಮುಖ್ಯ ಅತಿಥಿಗಳು ಉದ್ಘಾಟಿಸಿದರು.

ನಿಧನ



ಹಾಸನ : ಸರ್ಕಾರಿ ಆಸ್ಪತ್ರೆಯ ನಿವೃತ್ತ ಮೇಲ್ವಿಚಾರಕರು ಹಾಗೂ ಹಿರಿಯ ಫುಟ್‌ಬಾಲ್ ಆಟಗಾರರಾಗಿದ್ದ ಎಂ.ರಾಮಚಂದ್ರ (ರಾಮಣ್ಣ) ಅವರು ನಗರದ ರಕ್ಷಣಾಪುರಂನಲ್ಲಿರುವ ಅವರ ನಿವಾಸದಲ್ಲಿ ಬುಧವಾರ ಬೆಳಗ್ಗೆ ನಿಧನರಾದರು.

ಅನಾರೋಗ್ಯದಿಂದ ನಿಧನರಾದ ಅವರಿಗೆ 75 ವರ್ಷ ವಯಸ್ಸಾಗಿತ್ತು.

ಪತ್ನಿ, ಪುತ್ರ, ಪುತ್ರಿ ಮತ್ತು ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಬುಧವಾರ ಸಂಜೆ ದೊಡ್ಡಪುರ ಬಳಿ ಇರುವ ಜಮೀನಿನಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಿತು.

ಆಲೂರು ತಹಸೀಲ್ದಾರ್‌ರ ತಂದೆ ನಿಧನ

ಹಾಸನ : ಶಿಕ್ಷಣ ಇಲಾಖೆಯ ನಿವೃತ್ತ ನೌಕರ, ಜಯನಗರ ಬಡಾವಣೆ ನಿವಾಸಿ ಕೃಷ್ಣಪ್ಪ (86) ಅವರು ಮಂಗಳವಾರ ಮೈಸೂರಿನ ಆಸ್ಪತ್ರೆಯೊಂದರಲ್ಲಿ ಕೊನೆಯುಸಿರೆಳೆದರು. ಕಳೆದ 20 ದಿನಗಳಿಂದ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಮೃತರ ಪಾರ್ಥಿವ ಶರೀರದ ಅಂತಿಮ ಸಂಸ್ಕಾರವನ್ನು ಅವರ ಹುಟ್ಟೂರು ಚನ್ನರಾಯಪಟ್ಟಣ ತಾಲೂಕಿನ ನುಗ್ಗೇಹಳ್ಳಿಯಲ್ಲಿ ಬುಧವಾರ ಮಧ್ಯಾಹ್ನ 1 ಗಂಟೆ ಹೊತ್ತಿನಲ್ಲಿ ನೆರವೇರಿಸಲಾಯಿತು.

ಮೃತರು ಪತ್ನಿ, ಆಲೂರು ತಾಲೂಕು ತಹಸೀಲ್ದಾರ್ ಎನ್.ಕೆ. ಶಾರದಾಂಬ ಸೇರಿ ಐವರು ಪುತ್ರಿಯರು, ಇಬ್ಬರು ಪುತ್ರರು ಹಾಗೂ ಅಪಾರ ಬಂಧು - ಬಳಗವನ್ನು ಅಗಲಿದ್ದಾರೆ.

ನಿಮ್ಮ ಮನೆ ಮೇಲ್ಛಾವಣಿ ಮೇಲೆ ಒಂದಿಷ್ಟು ನೀರಿಟ್ಟು ಪಕ್ಷಿಗಳ ಬಾಯಾರಿಕೆ ತಣಿಸಿ

ಅಕ್ರಮ ಜಮೀನು ತೆರವಿಗೆ ಒತ್ತಾಯಿಸಿ ಗ್ರಾಮಸ್ಥರ ಪ್ರತಿಭಟನೆ

ಅಕ್ರಮವಾಗಿ ಉಳುಮೆ ಮಾಡುತ್ತಿರುವ ಜಮೀನನ್ನು ಬಿಡಿಸುವಂತೆ ಒತ್ತಾಯಿಸಿ ಜಮೀನಿನ ಬಳಿ ಗುಡಿಸಲುಗಳನ್ನು ಹಾಕಿ ಪ್ರತಿಭಟನೆ ನಡೆಸುತ್ತಿರುವ ಗ್ರಾಮಸ್ಥರು

ಬೇಲೂರು : ಸರ್ಕಾರಿ ಜಮೀನನ್ನು ಅಕ್ರಮವಾಗಿ ಉಳುಮೆ ಮಾಡುತ್ತಿರುವ ವ್ಯಕ್ತಿಯಿಂದ ಜಮೀನನ್ನು ಅಧಿಕಾರಿಗಳು ತೆರವುಗೊಳಿಸುವಂತೆ ಒತ್ತಾಯಿಸಿ ಮುಗುಳವಳ್ಳಿ ಹಾಗೂ ಹಾರೋಹಳ್ಳಿ ಗ್ರಾಮಸ್ಥರು ಜಮೀನಿನ ಹತ್ತಿರವೆ ಗುಡಿಸಲುಗಳನ್ನು ಹಾಕಿ ಪ್ರತಿಭಟನೆ ನೆಡೆಸಿದ ಘಟನೆ ನಡೆಯಿತು.

ಪ್ರತಿಭಟನೆ ನಡೆಸಿ ಮಾತನಾಡಿದ ಮುಗಳವಳ್ಳಿ ಗ್ರಾಮದ ಅನಂದ್, ಬೇಲೂರು ತಾಲೂಕಿನ ಮುಗಳವಳ್ಳಿ ಮತ್ತು ಹಾರೋವಳ್ಳಿ ಗ್ರಾಮಕ್ಕೆ ಸೇರಿದ ಸರ್ಕಾರಿ ಜಮೀನನ್ನು ಹೊಸಳ್ಳಿಯ ರಾಜು ಎಂಬುವವರು ಅಕ್ರಮವಾಗಿ ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ. ಆದರೆ ಈ ಎರಡು ಗ್ರಾಮಗಳಲ್ಲಿ ಬಡವರು ಕೂಲಿ ಕಾರ್ಮಿಕರಿದ್ದು, ಇವರ ಅನೂಕೂಲಕ್ಕಾಗಿ ಗ್ರಾಮಕ್ಕೆ ಸೇರಿರುವ ಗೋಮಾಳದ ಜಾಗವನ್ನು ಬಿಡಿಸಿ ಕೊಡಬೇಕೆಂದು ಒತ್ತಾಯಿಸಿದ ಅವರು ಮುಗಳವಳ್ಳಿ ಗ್ರಾಮದ ಸರ್ವೆ.ನಂ.80 ರಲ್ಲಿ 8.15 ಗುಂಟೆ ಮತ್ತು ಹಾರೋವಳ್ಳಿ ಗ್ರಾಮದ ಸ.ನಂ.15 ರಲ್ಲಿ 5.33 ಗುಂಟೆ ಜಮೀನನ್ನು ಹೊಸಳ್ಳಿಯ ರಾಜು ಅಕ್ರಮವಾಗಿ ಉಳುಮೆ ಮಾಡುತ್ತಿದ್ದಾರೆ. ಅಲ್ಲದೆ ಈ ಎರಡು ಗ್ರಾಮದಲ್ಲಿ ಎಲ್ಲ ಜಾತಿಯ ಬಡವರು ವಾಸ ಮಾಡುತ್ತಿದ್ದು, ಇವರಿಗೆ ಯಾವುದೆ ಜಮೀನು ಇರುವುದಿಲ್ಲ. ನಮ್ಮ ಊರಿನಲ್ಲಿರುವ ಗೋಮಾಳವನ್ನು ಬೇರೆ ಊರಿನವರು ಉಳುಮೆ ಮಾಡುತಿದ್ದಾರೆ. ನಮ್ಮ ಎರಡು ಗ್ರಾಮದ ಹಲವಾರು ಜನರಿಗೆ ವಾಸಿಸಲು ಮನೆ ಸರಿಯಾಗಿ ಇಲ್ಲ. ಮತ್ತು ಗ್ರಾಮದಲ್ಲಿರುವ ಜಾನುವಾರುಗಳಿಗೆ ಮೇಯಲು ಸ್ಥಳವಿಲ್ಲದೆ ತೊಂದರೆ ಅನುಭವಿಸುತ್ತಿದ್ದು, ತಕ್ಷಣವೆ ಸಂಬಂಧಿಸಿದ ಅಧಿಕಾರಿಗಳು ಇತ್ತ ಗಮನಹರಿಸಿ ಅಕ್ರಮವಾಗಿ ಉಳುಮೆ ಮಾಡುತ್ತಿರುವ ಜಮೀನನ್ನು ಬಿಡಿಸಿ ಗ್ರಾಮಸ್ಥರಿಗೆ ನೀಡಬೇಕು ಇಲ್ಲದಿದ್ದರೆ ಎರಡು ಗ್ರಾಮಸ್ಥರು ಸೇರಿ ತಾಲೂಕು ಕಛೇರಿ ಮತ್ತು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಉಗ್ರ ಪ್ರತಿಭಟನೆ ನೆಡೆಸಬೇಕಾಗುತ್ತದೆ ಎಂದು ತಿಳಿಸಿದರು.

ಪತ್ರಿಭಟನೆಯಲ್ಲಿ ಮುಗುಳವಳ್ಳಿ ಹಾಗೂ ಹಾರೋಹಳ್ಳಿ ಗ್ರಾಮಸ್ಥರಾದ ಮಹಮ್ಮದ್‌ಶಫಿ, ಚನ್ನಯ್ಯ, ದಾಸಯ್ಯ, ಲತೇಶ್, ಹೇಮಾವತಿ, ರತ್ನ, ನಾಜೀಯಾ, ಪುಟ್ಟಮ್ಮ, ಪಾಲಾಕ್ಷ, ಮಲ್ಲಯ್ಯ ಇನ್ನಿತರರಿದ್ದರು.

ಬಾಲಕನಿಗೆ ನೆರವು

ಚಂದ್ರಶೇಖರ್ ಬಿನ್ ಸುರೇಶ್, ದೊಡ್ಡಆಲದಹಳ್ಳಿ, ಶಾಂತಿಗ್ರಾಮ ಹೋ||, ಹಾಸನ ತಾ||

ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿರುವ 13 ವರ್ಷದ ಬಾಲಕ ಚಂದ್ರಶೇಖರ್‌ನ ಬಿಎಂಟಿ ಚಿಕಿತ್ಸೆಗೆ (Bone marrow Transplantation) 18.00 ಲಕ್ಷ ಅಗತ್ಯವಿದೆ. 24.09.2017ರಿಂದ ಬಿಎಂಟಿ ಚಿಕಿತ್ಸೆ
ಆರ [redacted] ಮಾಡಬಯಸುವವರು ಡಿ.ಸಿ. ಸುರೇಶ್. ಬ್ಯಾಂಕ್
ಖಾ 45001 ಕರ್ನಾಟಕ ಬ್ಯಾಂಕ್ IFSC Code
KA ಅಥವಾ ಜನತಾಮಾಧ್ಯಮ ಕಛೇರಿಗೆ ಹಣ ಸಂದಾಯ
ಮಾ ದೂ.ಸಂ: 97400 56750.

11- ಯವಾದ ಹಣ ರೂ. 4,68,612-00
1) ಕು
ಲ್ಲೂಕು ರೂ. 5,000-00
2)
ಚನ್ನಪಟ್ಟಣ ರೂ. 1,000-00
3) ರೂ. 1,000-00
ಒಟ್ಟು ಮೊತ್ತ ರೂ. 4,75,612-00

ಸೆಕ್ಯೂರಿಟಿ ಕೆಲಸಕ್ಕೆ ಬೇಕಾಗಿದ್ದಾರೆ

FIRST-MAN SECURITY SERVICE PVT.LTD-BANGALORE
ವಿದ್ಯಾರ್ಹತೆ -SSLC PASS, ವಯೋಮಿತಿ - 25-40 Years
ಸಂದರ್ಶನ ನಡೆಯುವ ಸ್ಥಳ :
TOBACCO BOARD ರಾಮನಾಥಪುರ
ದಿನಾಂಕ:13-10-2017, ಸಮಯ ಮದ್ಯಾಹ್ನ -3.30
ಸಂದರ್ಶನಕ್ಕೆ ಬರುವಾಗ ತರಬೇಕಾದ ದಾಖಲಾತಿಗಳು
ಆಧಾರ್‌ಕಾರ್ಡ್, ವೋಟರ್ ಐಡಿ, 8 PASSPORT PHOTO
ಕಡ್ಡಾಯವಾಗಿ ತರತಕ್ಕದ್ದು.
MOBILE NO :9449888608, 7846876740

ಭಗವಾನ್ ಕಾಫಿ
Bhagavan Coffee
ನಮ್ಮಲ್ಲಿ ಉತ್ತಮವಾದ **ತಾಜಾ** ಕಾಫಿಪುಡಿ **ಮಾತ್ರ**, ದೊರೆಯುತ್ತದೆ.
ಕಾಫಿಪುಡಿ ತಯಾರಿಕೆಯಲ್ಲಿ 50 ವರ್ಷಗಳ ಅನುಭವ
ತಾಜಾ ಕಾಫಿ ಪುಡಿಗೆ ಇಂದೇ ಭೇಟಿ ಕೊಡಿ
ನಮ್ಮಲ್ಲಿ ASSAM Tea-ಪುಡಿ ದೊರೆಯುತ್ತದೆ
ನಮ್ಮಲ್ಲಿ ಕಾಫಿ ಬೀಜವನ್ನು ಹದವಾಗಿ ಹುರಿದು ಪುಡಿ ಮಾಡಿಕೊಡಲಾಗುತ್ತದೆ.
ಭಗವಾನ್ ಕಾಫಿಪುಡಿ ಯಾವ ಅಂಗಡಿಯಲ್ಲಿಯೂ ದೊರೆಯುವುದಿಲ್ಲ
ಭಗವಾನ್ ಕಾಫಿ ವರ್ಕ್ಸ್, ಭಗವಾನ್ ಬಿಲ್ಡಿಂಗ್, ಕಟ್ಟಿನಕೆರೆ ಮಾರುಕಟಟ್ಟೆ
ಹಾಸನ. ಫೋ: 08172-269162

ಮಾನ್‌ಸೂನ್ ಆಫರ್
ಹಾಸನ ಜನತೆಗೆ ಸಂತೋಷದ ಸುದ್ದಿ
ದೇಶದ ಆರ್ಥಿಕ ವ್ಯವಸ್ಥೆ ಬದಲಾಗಿ ನಂತರ ಸುಧಾರಣೆಗೆ ಬಂದಿದೆ
ದೇಶದ ಆರ್ಥಿಕ ವ್ಯವಸ್ಥೆ ಬದಲಾದ ಕಾರಣದಿಂದ ಎಲ್ಲಾ ಚಿಕ್ಕ-ದೊಡ್ಡ ಶೋರೂಂಗಳ ವ್ಯಾಪಾರಿಗಳು ತುಂಬಾ ನಷ್ಟ ಅನುಭವಿಸಿದ್ದರಿಂದ ಎಲ್ಲಾ ಕಂಪನಿಯ ರೆಡಿಮೇಡ್ ಬಟ್ಟೆಗಳು ಗೋಡೌನ್‌ನಲ್ಲಿ ಉಳಿದುಕೊಂಡಿರುತ್ತದೆ. ಈ ಫ್ಯಾಕ್ಟರಿಗಳ ರೆಡಿಮೇಡ್ ಬಟ್ಟೆಗಳನ್ನು ತೆಗೆದುಕೊಂಡು ನಾವು ಹಾಸನದ ಶಂಕರಿಮಠದಲ್ಲಿ ಮಾರಾಟ ಮಾಡಲು ಇಚ್ಛಿಸಿರುತ್ತೇವೆ
ರೀಬಾಕ್ ಕಂಪನಿಯ ಟೀ ಶರ್ಟ್ಸ್
ಎಕ್ಸ್‌ಪೋರ್ಟ್ ಟೀ ಶರ್ಟ್ಸ್
Size S, M, L, XXL, 3XL, 4XL Avilable
Rs.99/-
ಕಾಟನ್ ಶರ್ಟ್ಸ್, ಫಾರ್ಮಲ್ ಶರ್ಟ್ಸ್
ಆಫೀಸರ್ಸ್ ವೇರ್ ಶರ್ಟ್ಸ್
ಸ್ಲಿಮ್ ಫಿಟ್ಸ್ ಶರ್ಟ್ಸ್
Rs.199/-
ಬ್ರ್ಯಾಂಡೆಡ್ ಕಾಟನ್ ಪ್ಯಾಂಟ್ಸ್ & ಜೀನ್ಸ್ Rs.499/-
ಬ್ರ್ಯಾಂಡೆಡ್ 3 ಶರ್ಟ್ಸ್ ಅಥವಾ 3 ಟೀ ಶರ್ಟ್ಸ್ Rs.999/-
ಸ್ಥಳ : ಶಂಕರ ಮಠ, ಕೆ.ಆರ್.ಪುರಂ, ಹಾಸನ
ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಇದೆ

Printed and Published by Dr. A.C. Munivenkategowda & Owned By Snehitaru N [redacted] a Clinic, R.C. Road, Hassan, Karnataka & Printed at Snehitaru Nirvahane Printing Press, R.C. Road, Hassan, Karnataka, Published From Snehitaru NirvahanePrintingPress, J C. Road, Hassan -Pin:573201, Editor :R. P. Venkateshmurthy. Ph: 268494 Fax No-08172-260494
http://janathamadhyama.epape e-mail: jm_hsn @yahoo.com siddujm@rediffmail.com